# ಗಾಳ ಬೀಸುವ ಬೇಟೆಗಾರ ಮೀನು!



ಸಾಗರ ಎಂಬುದು ವಿಸ್ಮಯಗಳ ಜಗತ್ತು. ಅದರ ಎದೆಯಾಳದಲ್ಲಿ ಮೀನೊಂದು ಯಾರಿಗೂ ಕಾಣದಂತೆ ಗಾಳ ಬೀಸುವ ಕಾಯಕವನ್ನು ನಿತ್ಯ ಮಾಡುತ್ತಿರುತ್ತದೆ. ಸಣ್ಣ ಮೀನನ್ನು ಹಿಡಿಯುವುದೇ ಅದರ ನಿರಂತರ ಚಟುವಟಿಕೆ. ಸಾಗರದ ಗರ್ಭದಲ್ಲಿ ಕೌತುಕ ಜೀವನ ನಡೆಸುವ ಈ 'ಬೇಟೆಗಾರ' ಮೀನನ್ನು 'ಆ್ಯಂಗಲರ್ ಫಿಷ್' ಎಂದು ಗುರುತಿಸಲಾಗಿದೆ.

'ಆ್ಯಂಗಲರ್‌ಫಿಷ್' ಎಂಬ ವರ್ಣರಂಜಿತ ಮೀನು. ಸಾಗರದ ಸಾವಿರಾರು ಮೀಟರ್ ಆಳದಲ್ಲಿ ನೆಲಸಿರುವ ಜೀವಿ. ಇದರ ಗಾತ್ರ ಸುಮಾರು 5 ಇಂಚಿನಿಂದ 8 ಇಂಚಿನಷ್ಟಿರುತ್ತದೆ. ವೈವಿಧ್ಯಮಯ ಆಕರ್ಷಕ ಬಣ್ಣ ಹೊಂದಿರುವ ಈ ಅಪರೂಪದ ಮೀನು, ಸಾಗರದ ಮೇಲ್ಭಾಗಕ್ಕೆ ತನ್ನ ದರ್ಶನವನ್ನು ನೀಡುವುದೇ ಇಲ್ಲ. ಗುಂಪಾಗಿ ಕಾಣುವ ಈ ಪ್ರಾಣಿ ಅತ್ಯಂತ ಮೃದು ದೇಹಿ. ಚಿಕ್ಕ ಚಿಕ್ಕ ಕಣ್ಣುಗಳನ್ನು ಹೊಂದಿರುವ ಇದರ ಜೈವಿಕ ಗುಣ ತುಂಬ ಕುತೂಹಲ ಹುಟ್ಟಿಸುವಂತಿದೆ.

ಮೂಳೆಗಳು ಇದಕ್ಕೆ ಭೌತಿಕ ರೂಪ ನೀಡಿದ್ದರೂ, ಅವುಗಳಿಗೆ ಸ್ಥಿರತೆ ಎಂಬುದು ಇಲ್ಲ. ಆ ಮೂಳೆಗಳಿಗೆ ಸ್ಥಿತಿಸ್ಥಾಪಕ ಗುಣ ಇರುವುದರಿಂದ ರಬ್ಬರ್‌ನಂತೆ ಹೀಚುವ, ಬಳ್ಳಿಯಂತೆ ಬಳಕುವ ವಿಶೇಷತೆಯಿದೆ. ಗಾಳಗಾರ ಮೀನು ಕಾಲಕ್ಕೆ ತಕ್ಕಂತೆ ತನ್ನ ಲಕ್ಷಣವನ್ನು ಬದಲಿಸಲು ಇದು ಅನುಕೂಲವಾಗಿದೆ. ಅದರ ಮೂಳೆಗೆ ಮಾಂಸ ತೆಳುವಾಗಿ ಅಂಟಿಕೊಂಡಿರುತ್ತದೆ. ಹರಿತವಾದ ಹಲ್ಲನ್ನು ಹೊಂದಿದ್ದು, ಅದರ ಬಾಯಿಗೆ ಹೊಂದಿಕೊಂಡಂತೆ 'ಗಾಳ'ದ ಸ್ವರೂಪದ ಒಂದು ಉದ್ದನೆಯ ನಾಳವಿದೆ. ಈ ಕಾರಣಕ್ಕಾಗಿಯೇ ಇದನ್ನು ಆ್ಯಂಗಲರ್ ಫಿಷ್ (ಗಾಳ ಮೀನು)ಎಂದು ಸಂಶೋಧಕರು ಗುರುತಿಸುತ್ತಾರೆ. ಮೂಳೆ ಇದ್ದರೂ 'ಮೃದ್ವಂಗಿ'ಯಾಗಿರುವ ಈ ಮೀನಿನ ಗಾತ್ರದಲ್ಲಿ ತಲೆ ದೊಡ್ಡದಾಗಿ ಕಾಣುತ್ತದೆ. ಕೆಳ ದವಡೆ ಚಿಕ್ಕದಾಗಿದ್ದು, ನೋಡಲು ಭಯಾನಕವಾಗಿದೆ.

ಮುಖಕ್ಕೆ ಹೊಂದಿಕೊಂಡಿರುವ ನಾಳ ಅಥವಾ ಗಾಳ ಅದರ ಉದರ ಪೋಷಣೆಗೆ ನೆರವಾಗುತ್ತದೆ. ಈ ಗಾಳವನ್ನು ಬಳಸಿಯೇ ಸಣ್ಣ ಮೀನುಗಳ ಬೇಟೆಯಾಡುವುದು ಇದರ ವಿಶೇಷ. ಬೇಟೆಗೆ ಉಪಯುಕ್ತವಾಗುವಂತೆ ಗಾಳದ ತುದಿಯಲ್ಲಿ ಮಾಂಸದ ತುಂಡೊಂದು ನೇತಾಡುವಂತೆ ಗೋಚರಿಸುತ್ತದೆ. ಇದು ಅನ್ಯ ಜೀವಿಗಳನ್ನು ಆಕರ್ಷಿಸುತ್ತದೆ. ಇಂತಹ ಹುಸಿ ಮಾಂಸವನ್ನು ಅರಸಿ ಬರುವ ಸಣ್ಣ ಮೀನು ಅಥವಾ ಕ್ರಿಮಿಗಳನ್ನು ಆ್ಯಂಗಲರ್‌ಫಿಷ್ ಗಬಕ್ಕನೆ ತಿನ್ನುತ್ತದೆ. ಸಣ್ಣ ಮೀನು ಸೇರಿದಂತೆ ಹುಳ– ಹುಪ್ಪಟೆಗಳನ್ನು ಇದು ತಿನ್ನುತ್ತದೆ. ಸಿಹಿ ನೀರಿನಲ್ಲಿಯೂ ಬದುಕುವ ಈ ಅಪರೂಪದ ಜೀವಿ ಜಗತ್ತಿನ ಎಲ್ಲೆಡೆ ಕಾಣಸಿಗುತ್ತದೆ.

ಇತ್ತೀಚೆಗಷ್ಟೆ ಉತ್ತರ ಆಸ್ಟ್ರೇಲಿಯಾದ ಈಶಾನ್ಯ ಭಾಗದ ಕರೊಲ್ ಸಮುದ್ರದ ಆಳದಲ್ಲಿ ಜೀವಿಸುವ ಆ್ಯಂಗಲರ್‌ಫಿಷ್‌ನ ಚಿತ್ರವನ್ನು ಕ್ವೀನ್ಸ್‌ಲೆಂಡ್ ಬ್ರೇನ್ ಸಂಸ್ಥೆಯ ವಿಜ್ಞಾನಿಗಳು ಆಧುನಿಕ ತಂತ್ರಜ್ಞಾನದ ಕ್ಯಾಮೆರಾ ಬಳಸಿ ಸೆರೆ ಹಿಡಿದಿದ್ದು, ಅದರ ಚಲನವಲನಗಳನ್ನು ಗುರುತಿಸಿದ್ದಾರೆ. ಅವರು ಸೆರೆಹಿಡಿದಿರುವ ಆ ಮೀನು ವರ್ಣರಂಜಿತವಾಗಿದೆ. ಇದಲ್ಲದೆ, ಕಂದು, ಕಪ್ಪು ಹೀಗೆ ವಿವಿಧ ಬಣ್ಣದ ಮೀನುಗಳೂ ಇವೆ.

ಸಾಮಾನ್ಯವಾಗಿ ಗಂಡು ಮೀನು ಒಂಟಿಯಾಗಿ ಬದುಕಿದರೆ, ಹೆಣ್ಣು ಮೀನು ತನ್ನ ಸಂಸಾರದ ಜೊತೆಗೂಡಿ ಇರುತ್ತದೆ. ವಂಶಾಭಿವೃದ್ಧಿ ಸಂದರ್ಭದಲ್ಲಿ ಗಂಡು ಆಕರ್ಷಿತವಾಗಿ ಸಮೂಹದತ್ತ ಬರುತ್ತದೆ. ವಿವಿಧ ಬಣ್ಣಗಳಲ್ಲಿ ಗೋಚರಿಸುವ ಈ ಮೀನನ್ನು ವೈಜ್ಞಾನಿಕವಾಗಿ 'ಪ್ಟೆರೊಫಿಲಂ ಸ್ಕೇಲರ್' ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಈ ವರ್ಗದಲ್ಲಿ ಸುಮಾರು 200ಕ್ಕೂ ಹೆಚ್ಚಿನ ಜಾತಿಯ ಮೀನುಗಳನ್ನು ಗುರುತಿಸಲಾಗಿದೆ.

–ರಾಘು



